# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 721
ಸದಸ್ಯರ ಹೆಸರು : ಶ್ರೀ ಕೆ.ಗೋವಿಂದರಾಜ್
ಉತ್ತರಿಸಬೇಕಾದ ದಿನಾಂಕ : 12.03.2020
ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ತೀವ್ರ ಸಂಚಾರ ದಟ್ಟಣೆಯಿಂದ ಸಾರ್ವಜನಿಕರಿಗೆ ಸಮಸ್ಯೆ ತಂದೊಡ್ಡುವುದಲ್ಲದೆ, ಅವರ ಸಮಯವನ್ನು ಹಾಳು ಮಾಡುವ ವಿಶ್ವದ ಅಗ್ರ 10 ನಗರಗಳ ಪಟ್ಟಿಯಲ್ಲಿ ಬೆಂಗಳೂರು ಪ್ರಥಮ ಸ್ಥಾನದಲ್ಲಿರುವುದಾಗಿ ಇತ್ತೀಚಿನ ಸಮೀಕ್ಷೆಯೊಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು.</td></tr>
<tr><td>(ಆ)</td><td>ಬಂದಿದ್ದಲ್ಲಿ, ಈ ಆತಂಕಕಾರಿ ಸಮಸ್ಯೆಗೆ ಕಾರಣಗಳೇನು;</td><td>ಬೆಂಗಳೂರು ನಗರ ಎದುರಿಸುತ್ತಿರುವ ಸಂಚಾರ ದಟ್ಟಣೆಗೆ ಕಾರಣಗಳು ಕೆಳಕಂಡಂತಿವೆ:-<br>ಅ) ಬೆಂಗಳೂರು ಮಹಾನಗರವು ದಿನೇ ದಿನೇ ಬೆಳೆಯುತ್ತಿದ್ದು, ಜನಸಂಖ್ಯೆಯು 2020ರ ಹೊತ್ತಿಗೆ 1 ಕೋಟಿ 30 ಲಕ್ಷ ಮೀರಿದೆ.<br>ಆ) ಲಭ್ಯವಿರುವ ರಸ್ತೆಗಳಲ್ಲಿ ಅಗಲೀಕರಣವಾಗಲೀ, ಇತರ ರೀತಿಯ ಉನ್ನತೀಕರಣಕ್ಕೆ ಪರ್ಯಾಯ ಮಾರ್ಗಗಳಿಲ್ಲದೆ ಸುಗಮ ಸಂಚಾರ ವ್ಯವಸ್ಥೆಗೆ ಅವಕಾಶವಿಲ್ಲವಾಗಿದೆ.<br>ಇ) ಬೆಂಗಳೂರು ನಗರದಲ್ಲಿ ಹಾಲಿ ನಡೆಯುತ್ತಿರುವ ವೈಟ್‌ಟಾಪಿಂಗ್, ಟೆಂಡರ್ ಶ್ಯೂರ್, ಸ್ಮಾರ್ಟ್ ಸಿಟಿ, ಬಿ.ಎಂ.ಆರ್.ಸಿ.ಎಲ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಿಂದಾಗಿ ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧವಿದೆ.</td></tr>
<tr><td>(ಇ)</td><td>ಬೆಂಗಳೂರು ಎದುರಿಸುತ್ತಿರುವ ತೀವ್ರವಾದ ಈ ಸಂಚಾರ ದಟ್ಟಣಿ ಸಮಸ್ಯೆ ಪರಿಹಾರಕ್ಕಾಗಿ ಸರ್ಕಾರ ಕೈಗೊಂಡಿರುವ ಅಥವಾ ಕೈಗೊಳ್ಳಲಾಗುವ ದೀರ್ಘಾವಧಿ ಪರಿಹಾರಗಳೇನು?</td><td>ಬೆಂಗಳೂರು ಎದುರಿಸುತ್ತಿರುವ ಸಂಚಾರ ದಟ್ಟಣೆ ಸಮಸ್ಯೆ ಪರಿಹಾರಕ್ಕಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-<br><br>(ಅ)<u>ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳ ನಿರ್ಮಾಣ</u><br>ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಂಚಾರ ವ್ಯವಸ್ಥೆಯನ್ನು ಉತ್ತಮ ಪಡಿಸುವಹ ಸಲುವಾಗಿ ನಗರ ವ್ಯಾಪ್ತಿಯಲ್ಲಿ ಈ ಕೆಳಕಂಡ 12 ಹೆಚ್ಚು ವಾಹನ ದಟ್ಟಣೆ ಕಾರಿಡಾರರ್ ಗಳನ್ನು ಗುರುತಿಸಲಾಗಿದೆ:
<table>
<tr><td>1.</td><td>ಬಳ್ಳಾರಿ ರಸ್ತೆ</td><td>–</td><td><u>ಚಾಲುಕ್ಯ ವೃತ್ತದಿಂದ ಹೆಬ್ಬಾಳದವರೆಗೆ</u><br>ವಿಂಡ್ಸರ್ ಮ್ಯಾನರ್ ಜಂಕ್ಷನ್ – ರಮಣ ಮಹರ್ಷಿ ರಸ್ತೆ – ಮೇಖ್ರಿ ವೃತ್ತದ ಮಾರ್ಗವಾಗಿ</td></tr>
<tr><td>2</td><td>ಹಳೇ ಮದ್ರಾಸ್ ರಸ್ತೆ</td><td>–</td><td><u>ಟ್ರಿನಿಟಿ ವೃತ್ತದಿಂದ ಕೆ.ಆರ್. ಪುರಂ ವರೆಗೆ</u><br>ಹಲಸೂರು ಕೆರೆ – ಹಳೆ ಮದ್ರಾಸ್ ರಸ್ತೆ ಮತ್ತು ಬೆನ್ನಿಗಾನಹಳ್ಳಿ ಹಾಗೂ</td></tr>
</table></td></tr>
</table>

| | | | | | |
|---|---|---|---|---|---|
| | | | | | **ಕೆ.ಆರ್. ಪುರಂನಿಂದ ರಾಷ್ಟ್ರೀಯ ಹೆದ್ದಾರಿ 648 ವರೆಗೆ** ಹೂಡಿ – ಐಟಿಪಿಎಲ್ ಮತ್ತು ಹೋಫ್ ಫಾರಂ ಮಾರ್ಗವಾಗಿ |
| | | 3 | ಹಳೇ ಏರ್‌ಪೋರ್ಟ್ ರಸ್ತೆ | – | **ಎ.ಎಸ್.ಸಿ ಸೆಂಟರ್ ನಿಂದ ಕಾಡುಗೋಡಿ ವರೆಗೆ** ದೊಮ್ಮಲೂರು – ಮಾರತ್‌ಹಳ್ಳಿ – ಕುಂದಲಹಳ್ಳಿ – ವರ್ತೂರು ಮತ್ತು ಹೋಫ್ ಫಾರಂ ಮಾರ್ಗವಾಗಿ |
| | | 4 | ಸರ್ಜಾಪುರ ರಸ್ತೆ | – | **ಹೊಸೂರು ರಸ್ತೆ ಸೆಂಟ್ ಜಾನ್ಸ್ ಆಸ್ಪತ್ರೆಯಿಂದ ಬಿಬಿಎಂಪಿ ವ್ಯಾಪ್ತಿಯ ಕಾರ್ಮೆಲ್‌ರಾಂ ಬ್ರಿಡ್ಜ್‌ವರೆಗೆ** ಜಕ್ಕಸಂದ್ರ – ಇಬ್ಲೂರು – ಹರಳೂರು ಜಂಕ್ಷನ್ ಮಾರ್ಗವಾಗಿ |
| | | 5 | ಹೊಸೂರು ರಸ್ತೆ | – | **ವೆಲ್ಲಾರ ಜಂಕ್ಷನ್ ನಿಂದ ಸಿಲ್ಕ್ ಬೋರ್ಡ್‌ವರೆಗೆ** ಆಡುಗೋಡಿ – ಫೋರಂ ಮಾಲ್ ಮತ್ತು ಮಡಿವಾಳ ಮಾರ್ಗವಾಗಿ |
| | | 6 | ಬನ್ನೇರುಘಟ್ಟ ರಸ್ತೆ | – | **ಡೈರಿ ವೃತ್ತದಿಂದ ನೈಸ್ ರಸ್ತೆ ವರೆಗೆ** ಜಯದೇವ ಫ್ಲೈಓವರ್ – ಜೆ.ಡಿ. ಮರ ಜಂಕ್ಷನ್ – ಬಿಳೇಕಳ್ಳಿ – ಅರಕೆರೆ ಮತ್ತು ಗೊಟ್ಟಿಗೆರೆ ಮಾರ್ಗವಾಗಿ |
| | | 7 | ಕನಕಪುರ ರಸ್ತೆ | – | **ಕೆ.ಆರ್. ರಸ್ತೆಯಿಂದ ನೈಸ್ ರಸ್ತೆವರೆಗೆ** ಬನಶಂಕರಿ – ಸಾರಕ್ಕಿ – ಕೋಣನಕುಂಟೆ ಮಾರ್ಗವಾಗಿ |
| | | 8 | ಮೈಸೂರು ರಸ್ತೆ | – | **ಹಡ್ಸನ್ ವೃತ್ತದಿಂದ ನೈಸ್ ರಸ್ತೆವರೆಗೆ** ಟೌನ್‌ಹಾಲ್ – ಸ್ಯಾಟಲೈಟ್ ಟೌನ್ – ನಾಯಂಡಹಳ್ಳಿ – ಜ್ಞಾನಭಾರತಿ – ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ & ಕೆಂಗೇರಿ ಸ್ಯಾಟಲೈಟ್ ಟೌನ್ ಮಾರ್ಗವಾಗಿ |
| | | 9 | ಮಾಗಡಿ ರಸ್ತೆ | – | **ಹಳೇ ಬಿನ್ನಿ ಮಿಲ್ ನಿಂದ ನೈಸ್ ರಸ್ತೆವರೆಗೆ** ಟೋಲ್‌ಗೇಟ್ ಜಂಕ್ಷನ್ – ಜೈಮುನಿರಾವ್ ವೃತ್ತ – ಹೌಸಿಂಗ್ ಬೋರ್ಡ್ – ಕಾಮಾಕ್ಷಿಪಾಳ್ಯ – ಹೊರವರ್ತುಲ ರಸ್ತೆ – ಶ್ರೀಗಂಧಕಾವಲ್ ಸುಂಕದಕಟ್ಟೆ ಮಾರ್ಗವಾಗಿ **ಹಾಗೂ** **ಅಂಜನ ನಗರ ಔಟರ್ ರಿಂಗ್ ರಸ್ತೆ – ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಮೈಸೂರು ರಸ್ತೆ ವರೆಗೆ** ಜಯದೇವ – ಜೆ.ಡಿ. ಮರ ಜಂಕ್ಷನ್ |

| | | | |
|---|---|---|---|
| | | | ಮಾರ್ಗವಾಗಿ |
| 10 | ತುಮಕೂರು ರಸ್ತೆ | – | <u>ಓಕಳಿಪುರಂನಿಂದ ಗೊರಗುಂಟೆಪಾಳ್ಯವರೆಗೆ</u><br>ಡಾ॥ ರಾಜ್‌ಕುಮಾರ್ ರಸ್ತೆ – ಸೋಪ್ ಫ್ಯಾಕ್ಟರಿ ಜಂಕ್ಷನ್ ಮತ್ತು ಯಶವಂತಪುರ ಮಾರ್ಗವಾಗಿ |
| 11 | ವೆಸ್ಟ್ ಆಫ್ ಕಾರ್ಡ್ ರಸ್ತೆ | – | <u>ಸೋಪ್ ಫ್ಯಾಕ್ಟರಿಯಿಂದ ಮೈಸೂರು ರಸ್ತೆವರೆಗೆ</u><br>ಇಸ್ಕಾನ್ – ರಾಜಾಜಿನಗರ – ಟೋಲ್‌ಗೇಟ್ ಜಂಕ್ಷನ್, ವಿಜಯನಗರ ಮತ್ತು ದೀಪಾಂಜಲಿ ಮಾರ್ಗವಾಗಿ |
| 12 | ಹೊರವರ್ತುಲ ರಸ್ತೆ | – | <u>ತುಮಕೂರು ರಸ್ತೆಯಿಂದ ತುಮಕೂರು ರಸ್ತೆವರೆಗೆ</u><br>ಹೆಬ್ಬಾಳ – ಕೆ.ಆರ್. ಪುರಂ – ಮಾರತ್‌ಹಳ್ಳಿ – ಇಬ್ಲೂರು, ಸೆಂಟ್ರಲ್ ಸಿಲ್ಕ್ ಬೋರ್ಡ್ – ಜೆ.ಡಿ. ಮರ ಜಂಕ್ಷನ್ – ನಾಯಂಡಹಳ್ಳಿ ಜಂಕ್ಷನ್ – ಕೊಟ್ಟಿಗೆಪಾಳ್ಯ ಜಂಕ್ಷನ್ ಮತ್ತು ಗೊರಗುಂಟೆಪಾಳ್ಯ ಮಾರ್ಗವಾಗಿ |

**(ಆ) <u>ಸಿ.ಬಿ.ಡಿ ಏರಿಯಾ: (ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್)</u>**
ಬೆಂಗಳೂರು ನಗರ ವ್ಯಾಪ್ತಿಯಲ್ಲಿ ವಿಧಾನಸೌಧದ ಸುತ್ತ 4 ಚ.ಕಿ.ಮೀ ವ್ಯಾಪ್ತಿಯನ್ನು ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ ಪ್ರದೇಶವೆಂದು ಈಗಾಗಲೇ ಘೋಷಿಸಿ ಈ ಪ್ರದೇಶದಲ್ಲಿ ಸುಗಮ ಸಂಚಾರಕ್ಕೆ ಅಭಿವೃದ್ಧಿ ಕಾರ್ಯಕೈಗೊಳ್ಳಲಾಗುತ್ತಿದೆ.

**(ಇ) <u>ಬೆಂಗಳೂರು ನಗರ ಸಂಚಾರ ಘಟಕದಿಂದ ವಾಹನ ಸಂಚಾರ ದಟ್ಟಣೆ ನಿಯಂತ್ರಿಸಲು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ:–</u>**

- ❖ ನಗರದ ಹಲವಾರು ಸ್ಥಳಗಳಲ್ಲಿ ಬಲ ತಿರುವು ಹಾಗೂ ಯು-ತಿರುವುಗಳನ್ನು ನಿರ್ಬಂಧಿಸಲಾಗಿದೆ.
- ❖ ಬೆಂಗಳೂರು ನಗರದ 107 ಪ್ರಮುಖ ರಸ್ತೆಗಳನ್ನು ಗುರುತಿಸಿ ಝೀರೋ ಟಾಲರೆನ್ಸ್ ರಸ್ತೆ ಗುರುತಿಸಿದೆ.
- ❖ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳು ಬೆಳಿಗ್ಗೆ 11–00 ಗಂಟೆಯಿಂದ ಸಂಜೆ 04–00 ಗಂಟೆಯವರೆಗೆ ಹಾಗೂ ರಾತ್ರಿ 10–00 ಗಂಟೆಯಿಂದ ಬೆಳಿಗ್ಗೆ 07–00ಗಂಟೆಯವರೆಗೆ ಸಂಚರಿಸುವಂತೆ ಕ್ರಮ ವಹಿಸಿದೆ.
- ❖ ಬೆಂಗಳೂರು ನಗರದಾದ್ಯಂತ ಸಮಾನ ವೇಗಮಿತಿಯನ್ನು ಜಾರಿಗೊಳಿಸಲಾಗಿದ್ದು ಅತಿ ವೇಗವಾಗಿ ಚಲಿಸುವವರ ವಿರುದ್ಧವೂ ಸಹ ಕಟ್ಟು ನಿಟ್ಟಿನ ಕ್ರಮಗಳನ್ನು ಜರುಗಿಸಲಾಗಿದೆ.
- ❖ ಸಂಚಾರ ನಿರ್ವಹಣಾ ಕೇಂದ್ರವು (ಟಿಎಂಸಿ) ಆಧುನಿಕ ತಂತ್ರಜ್ಞಾನದಿಂದ ಕಣ್ಗಾವಲು ಕ್ಯಾಮರಾದ ಮೂಲಕ ಸಂಚಾರ

| | | |
|---|---|---|
| | | ದಟ್ಟಣೆಯನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗಿದೆ. 10 ಜಂಕ್ಷನ್‌ಗಳಲ್ಲಿ ಆರ್.ಎಲ್.ವಿ.ಡಿ (Red Light Violation Detection) ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು ಸಿಗ್ನಲ್ ಜಂಪಿಂಗ್ ಮತ್ತು ಲೇನ್ ಡಿಸಿಪ್ಲಿನ್ ಉಲ್ಲಂಘನೆಯಾಗದಂತೆ ಕ್ರಮವಹಿಸಲಾಗಿದೆ.<br>❖ 223 ಜನ ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ಬಳಸಿಕೊಳ್ಳಲಾಗುತ್ತಿದೆ.<br>❖ ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಹಾಗೂ ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಸಹ ವೃತ್ತಿಪರ ಚಾಲಕರುಗಳಿಗೆ ಹಾಗೂ ಶಾಲಾ ವಾಹನಗಳ ಚಾಲಕರಿಗೆ ವಿಶೇಷವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಅರಿವು ಮೂಡಿಸುವ ಉದ್ದೇಶವನ್ನು ಸಫಲಗೊಳಿಸಲಾಗುತ್ತಿದೆ. |

**ಹೆಚ್‌ಡಿ 37 ಎಸ್‌ಎಸ್‌ಟಿ 2020**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು